ಜಮೀನು ಖರೀದಿಗೆ ಹಣಕಾಸಿನ ನೆರವು.

3348(4438) ಶ್ರೀ ಅಂಗಾರ ಎಸ್. (ಸೂಳ್ಯ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿ ವರ್ಗದ ಜನರಿಗೆ ಭೂ ಒಡೆತನ ಯೋಜನೆಯಡಿಯಲ್ಲಿ ಜಮೀನು ಖರೀದಿಸಲು ಸರ್ಕಾರ ನೀಡಿದ ಅನುದಾನ ಎಷ್ಟು ;

ಆ) ಸರ್ಕಾರ ನೀಡುವ ಅನುದಾನದಲ್ಲಿ ಖರೀದಿಸಲು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

ಇ) ಕೃಷಿ ಅಥವಾ ಕೃಷಿಯೇತರ ಜಮೀನು ಖರೀದಿಸಿದರೆ ಆ ಜಮೀನಿಗೆ ತಗಲುವ ಮೌಲ್ಯವನ್ನು ಸರ್ಕಾರವೇ ನೀಡಬಹುದೆ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಭೂ ಒಡೆತನ ಯೋಜನೆಯಡಿ ಒಬ್ಬ ಫಲಾಪೇಕ್ಷಿಗೆ 1.00 ಎಕರೆ ತರಿ ಜಮೀನು ಅಥವಾ 2 ಎಕರೆ ಖುಷ್ಕಿ ಜಮೀನನ್ನು ಖರೀದಿಸಲು ಘಟಕ ವೆಚ್ಚ ರೂ. 60,000ಗಳ ಅನುದಾನವನ್ನು ಸರ್ಕಾರ ನೀಡುತ್ತದೆ. ಇದರಲ್ಲಿ ಶೇ. 50 ಭಾಗ ಸಹಾಯಧನವಾಗಿರುತ್ತದೆ. ಶೇ. 50 ಭಾಗ ಸಾಲವಾಗಿರುತ್ತದೆ.

ಆ) ಬಂದಿದೆ. ಹಿಂದೆ ಇದ್ದ ರೂ. 50,000-00 ಘಟಕ ವೆಚ್ಚವನ್ನು ರೂ. 60,000ಕ್ಕೆ ಹೆಚ್ಚಿಸಿ ಸಂಖ್ಯೆ ಸಕಇ 168 ಎಸ್‌ಡಿಸಿ 2000 ದಿನಾಂಕ 4-2-2000 ರಂದು ಆದೇಶ ಹೊರಡಿಸಿದೆ.

ಇ) ನಿಗದಿತ ಘಟಕ ವೆಚ್ಚದೊಳಗೆ ಕೃಷಿ ಜಮೀನನ್ನು ಖರೀದಿಸಿದರೆ ಆ ಜಮೀನಿಗೆ ತಗಲುವ ಮೌಲ್ಯವನ್ನು ಸರ್ಕಾರ ನೀಡುತ್ತಿದೆ. ಆದರೆ ಕೃಷಿಯೇತರ ಜಮೀನಿಗೆ ಈ ಯೋಜನೆಯಲ್ಲಿ ಜಮೀನನ್ನು ಖರೀದಿಸಲು ಅವಕಾಶವಿಲ್ಲ.

ಸುಳ್ಯ ನಗರ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ.

3349(4440) ಶ್ರೀ ಅಂಗಾರ ಎಸ್. (ಸೂಳ್ಯ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.